
## ನಾಮರಾಮಾಯಣದ ರಚನಕಾರರು

ಕಾಲಕ್ರಮೇಣ, ಈ 'ನಾಮರಾಮಾಯಣ'ದ ಜೊತೆಗೆ 'ಭಯಹರ ಮಂಗಲ ದಶರಥ ರಾಮ್' ಎಂದು ಆರಂಭವಾಗುವ ಪ್ರಾರ್ಥನೆ ಮತ್ತು 'ಕನಕಾಂಬರ ಕಮಲಾಸನ' ಎಂದು ಆರಂಭ ವಾಗುವ ಸ್ತುತಿ ಅಥವಾ ಸ್ತವ – ಇವೆರಡೂ ಸೇರ್ಪಡೆ ಯಾದವು. ಅವು ಹೀಗೆ ಸೇರಿಕೊಂಡದ್ದು ಯಾವಾಗ ಎಂಬುದು ಕುತೂಹಲದ ಪ್ರಶ್ನೆ. ಸ್ವಾಮಿ ಪ್ರಭಾನಂದರು ಈ ಬಗ್ಗೆ ಹೀಗೆ ಬರೆಯುತ್ತಾರೆ: "೧೯೨೧ನೇ ಇಸವಿಯಲ್ಲಿ ಸ್ವಾಮಿ ಬ್ರಹ್ಮಾನಂದಜಿ ಮಹಾರಾಜರು ದಕ್ಷಿಣಭಾರತ ಪ್ರವಾಸ ಮಾಡಿದರು. ಆ ಸಮಯದಲ್ಲಿ **'ಭಯಹರ ಮಂಗಲ ದಶರಥ ರಾಮ'** ಸ್ತೋತ್ರವನ್ನು ಜೋಡಿಸಿಕೊಂಡು, ರಾಮನಾಮವು ಸದ್ಯ ಚಲಾವಣೆಯಲ್ಲಿರುವ ರೂಪವನ್ನು ಪಡೆದುಕೊಂಡಿತು."

ಎಂಟು ಸಾಲುಗಳ ಈ ಪ್ರಾರ್ಥನೆಯ ಕೊನೆಯ ಎರಡು ಸಾಲುಗಳು ಬಹಳ ಪ್ರಸಿದ್ಧವಾಗಿವೆ : **'ರಘುಪತಿ ರಾಘವ ರಾಜಾ ರಾಮ, ಪತಿತಪಾವನ ಸೀತಾರಾಮ.'** ಇದಕ್ಕೆ ಮಹಾತ್ಮ ಗಾಂಧಿ ಅವರು, **'ಈಶ್ವರ ಅಲ್ಲಾ ತೇರೇ ನಾಮ್, ಸಬಕೋ ಸನ್ಮತಿ ದೇ ಭಗವಾನ್'** ಎಂಬ ಸಾಲನ್ನು ಸೇರಿಸಿ, ತಾವು ನಡೆಸುತ್ತಿದ್ದ ಪ್ರಾರ್ಥನಾ ಸಭೆಗಳಲ್ಲಿ ಹಾಡಲು ಆರಂಭಿಸಿದರು. ಇದು ದೇಶದ ಎಲ್ಲೆಡೆ ಪ್ರಸಿದ್ಧಿಗೆ ಬಂದಿತು.

ಬಹಳ ಹಿಂದಿನಿಂದಲೂ **'ರಘುಪತಿ ರಾಘವ ರಾಜಾರಾಮ್'** ಎಂಬ ಈ ಭಜನೆಯು ಪ್ರಚಲಿತವಾಗಿದೆ. ಇದನ್ನು ರಚಿಸಿದವರು ಯಾರು ಎನ್ನುವುದು ಇದುವರೆಗೂ ತಿಳಿದುಬಂದಿಲ್ಲ. ಆದರೆ ಇದನ್ನು ಬಳಕೆಗೆ ತಂದ ಯಶಸ್ಸು ಪ್ರಖ್ಯಾತ ಹಿಂದೂಸ್ತಾನಿ ಸಂಗೀತಜ್ಞರಾದ ಪಂಡಿತ ವಿಷ್ಣು ದಿಗಂಬರ ಪಲೂಸ್ಕರ್ ಅವರಿಗೆ ಸೇರುತ್ತದೆ. ೧೯೧೬ರ ಮಳೆಗಾಲದಲ್ಲಿ, ಚಾತುರ್ಮಾಸ ವ್ರತಾಚರಣೆಯ ವೇಳೆಯಲ್ಲಿ, ಅವರು ಮುಂಬೈನ ಮಾಧವಬಾಗ್‌ನಲ್ಲಿ ತುಳಸೀದಾಸ ರಾಮಾಯಣದ ಪ್ರವಚನ ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಇದಕ್ಕೂ ಮುನ್ನ ತುಳಸೀ ರಾಮಾಯಣದ ಚೌಪಾಯಿ (ಚೌಪದಿ), ದೋಹ (ದ್ವಿಪದಿ), ಛಂದಸ್ಸು ಇತ್ಯಾದಿಗಳನ್ನು ಶಾಸ್ತ್ರೀಯ ಸಂಗೀತದ ಬಗೆಯಲ್ಲಿ ಹಾಡುವ ವಾಡಿಕೆ ಇತ್ತು. ಪಲೂಸ್ಕರರು ತಮ್ಮ ಪ್ರವಚನಗಳಲ್ಲಿ, **'ರಘುಪತಿ ರಾಘವ ರಾಜಾರಾಮ'** ಭಜನೆಯನ್ನು ಹಾಡಿ ಜನಪ್ರಿಯಗೊಳಿಸಿದರು. ಈ ಸ್ತುತಿಯ ವಿಷಯವಾಗಿ ಸ್ವಾಮಿ ತುರೀಯಾನಂದರು ಹೀಗೆ ಹೇಳುತ್ತಾರೆ: "ವಿಷ್ಣು ದಿಗಂಬರರು 'ಕನಕಾಂಬರ' ಸ್ತೋತ್ರವನ್ನು ಹಾಡುತ್ತಿದ್ದಾಗ, ಶ್ರೋತೃಗಳು ಮೈಮರೆಯುತ್ತಿದ್ದರು. ಆಹಾ, ಎಂಥ ಭಾವ ಅವರದು! ಅವರು ಯಮನ್ ಕಲ್ಯಾಣ್ ರಾಗದಲ್ಲಿ ಅದನ್ನು ಹಾಡುತ್ತಿದ್ದರು."

'ಪ್ರಾರ್ಥನೆ' ಎನ್ನುವ ಹೆಸರಿನಲ್ಲಿ 'ರಘುಪತಿ ರಾಘವ ರಾಜಾ ರಾಮ' ಭಜನೆ ಯಾವಾಗ ಸೇರ್ಪಡೆಯಾಯಿತು ಎನ್ನುವುದು ನಿಶ್ಚಿತವಾಗಿ ತಿಳಿದುಬಂದಿಲ್ಲ. ಆದರೆ ಸ್ತವ (ಕನಕಾಂಬರ) ಯಾವಾಗ ಸೇರ್ಪಡೆಯಾಯಿತು ಎನ್ನುವುದನ್ನು ನಿಶ್ಚಿತವಾಗಿ ಹೇಳಬಹುದು. ಸ್ವಾಮಿ ಬ್ರಹ್ಮಾನಂದಜಿ ಮಹಾರಾಜರು



*ಪಂಡಿತ ವಿಷ್ಣು ದಿಗಂಬರ ಪಲೂಸ್ಕರ್*

೧೯೨೧ನೇ ಇಸವಿಯಲ್ಲಿ ರಾಮನಾಮ ಸಂಕೀರ್ತನೆಯ ಏಳನೇ ಮುದ್ರಣದಲ್ಲಿ ಅದನ್ನು ಸೇರಿಸಿದ್ದಾರೆ. ಬೇಲೂರು ಮಠದಿಂದ ಪ್ರಕಟಗೊಂಡ ಈ ಏಳನೆಯ ಮುದ್ರಣದ ಮುನ್ನುಡಿಯಲ್ಲಿ ಪೂಜ್ಯ ಸ್ವಾಮಿ ಬ್ರಹ್ಮಾನಂದಜಿ ಮಹಾರಾಜರು ಹೀಗೆ ಬರೆಯುತ್ತಾರೆ: "ಇಷ್ಟು ಅಲ್ಪಾವಧಿಯಲ್ಲಿ ಆರು ಮುದ್ರಣಗಳಾಗಿವೆ... ಈ ಸಲ ಅಷ್ಟೋತ್ತರ ಶತನಾಮ ರಾಮಾಯಣದ ಕೊನೆಯಲ್ಲಿ ಶ್ರೀರಾಮಚಂದ್ರನ ಸ್ತುತಿಯನ್ನು (ಸ್ತವ) ಸೇರಿಸಲಾಗಿದೆ."

## ಧ್ವನಿ-ಮುದ್ರಣ

ಸಂಪೂರ್ಣ ರಾಮನಾಮ ಸಂಕೀರ್ತನೆಯ ಧ್ವನಿಮುದ್ರಣದ ಕ್ಯಾಸೆಟ್ ಮೊಟ್ಟಮೊದಲು ಚೆನ್ನೈ ಶ್ರೀರಾಮಕೃಷ್ಣ ಮಠದಿಂದ ಬಿಡುಗಡೆಯಾಯಿತು. ನಂತರ ಬೇಲೂರು ಮಠದ ಪಕ್ಕದಲ್ಲಿಯೇ ಇರುವ ರಾಮಕೃಷ್ಣ ಮಿಷನ್ ಶಾರದಾ ಪೀಠದ ವತಿಯಿಂದ ಧ್ವನಿಸುರುಳಿ ಮತ್ತು ಸಿ.ಡಿ.ಗಳನ್ನು ಹೊರತರಲಾಯಿತು. ಇವು ಈಗ ರಾಮಕೃಷ್ಣ ಮಹಾಸಂಘದ ಎಲ್ಲ ಶಾಖಾಕೇಂದ್ರಗಳಲ್ಲಿಯೂ ಲಭ್ಯವಿವೆ. ಸುಪ್ರಸಿದ್ಧ ಕರ್ನಾಟಕ ಶಾಸ್ತ್ರೀಯ ಗಾಯಕಿಯಾದ ಭಾರತರತ್ನ ಡಾ. ಎಂ. ಎಸ್. ಸುಬ್ಬುಲಕ್ಷ್ಮಿ ಅವರು ಈ ಸಂಕೀರ್ತನೆಯನ್ನು 'ಬಾಲಾಜಿ ಪಂಚರತ್ನ'ದ ಧ್ವನಿಸುರುಳಿಯಲ್ಲಿ 'ರಾಮ ನಾಮಾವಳಿ' ಎಂಬ ಹೆಸರಿನಲ್ಲಿ ಹಾಡಿದ್ದಾರೆ. ಇದನ್ನು ಇಂಟರ್‌ನೆಟ್‌ನಲ್ಲಿಯೂ ಕೇಳಬಹುದು.

(ಮುಂದುವರೆಯುವುದು)

# ಶ್ರೀರಾಮಾನುಜರು - ಜೀವನ ಮತ್ತು ಸಾಧನೆ

**ಎಚ್. ವಿ. ಸರೋಜ**

*(ಹಿಂದಿನ ಸಂಚಿಕೆಯಿಂದ ಮುಂದುವರೆದುದು)*

ರಾಮಾನುಜರನ್ನು ಕಂಡರೆ ಆಗದಿದ್ದ ಇತರ ಶಿಷ್ಯರು ಹೇಗಾದರೂ ಮಾಡಿ, ಅವರನ್ನು ಮಗಿಸಿಯೇಬಿಡಬೇಕೆಂದು ತೀರ್ಮಾನಿಸಿಕೊಂಡರು. ಗುರು ಯಾದವಪ್ರಕಾಶರು ತಮ್ಮೆಲ್ಲ ಶಿಷ್ಯರ ಜೊತೆಗೆ ಕಾಶೀಯಾತ್ರೆ ಹೊರಟರು. ಅವರೊಡನೆ ರಾಮಾನುಜರು ಮತ್ತು ಅವರ ನೆಂಟನಾದ ಗೋವಿಂದನೂ ಹೊರಟರು. ಅವರೆಲ್ಲ ದಾರಿಯಲ್ಲಿ ವಿಂಧ್ಯಪರ್ವತದ ಬಳಿಗೆ ಬಂದರು. ಅದೊಂದು ಗೊಂಡಾರಣ್ಯ. ಕಾಡು ದಟ್ಟವಾಗಿರುವ ಸ್ಥಳ. ಅಲ್ಲಿ ರಾಮಾನುಜರನ್ನು ಮುಗಿಸಿಬಿಡಲು ಶಿಷ್ಯರು ನಿರ್ಧರಿಸಿದರು. ಅದರ ಸುಳಿವು ಗೋವಿಂದನಿಗೆ ಹೇಗೋ ಗೊತ್ತಾಗಿ ಹೋಯಿತು. ಇದನ್ನು ಅವನು ರಾಮಾನುಜರಿಗೆ ತಿಳಿಸಿ, ಅಲ್ಲಿಂದ ತಪ್ಪಿಸಿಕೊಂಡುಹೋಗುವಂತೆ ಕೇಳಿಕೊಂಡ. ಅಲ್ಲಿಂದ ರಾಮಾನುಜರು ತಪ್ಪಿಸಿಕೊಂಡರು. ಇತರರು ಎಷ್ಟು ಹುಡುಕಿದರೂ ಸಿಕ್ಕಲಿಲ್ಲ. ಕಾಡಿನಲ್ಲಿ ಯಾವುದೋ ಮೃಗ ತಿಂದುಹಾಕಿರಬಹುದೆಂದು, ತಮ್ಮ ಪ್ರಯಾಣವನ್ನು ಮುಂದುವರೆಸಿ, ಕಾಶಿಯನ್ನು ತಲುಪಿದರು.

ಇತ್ತ ಕಾಡಿನಲ್ಲಿ ರಾಮಾನುಜರು ದಾರಿ ಹುಡುಕುತ್ತ ಅಲೆದಾಡಿದರು. ಹಸಿವು, ಬಾಯಾರಿಕೆ, ಕಾಡುಮೃಗಗಳ ಭಯ – ಇವುಗಳಿಂದ ತತ್ತರಿಸಿದರು. ನಾರಾಯಣನ ಧ್ಯಾನ ಮಾಡುತ್ತ ಒಂದು ಮರದ ಕೆಳಗೆ ಮಲಗಿದರು. ಎಚ್ಚರಗೊಂಡಾಗ ಸಾಯಂಕಾಲವಾಗಿತ್ತು. ಕಾಡಿನಿಂದ ಹೊರಗೆ ಬರುವುದು ಹೇಗೆ ಎಂದು ಯೋಚಿಸುತ್ತಿರುವಾಗ ಒಬ್ಬ ಗಂಡಸು ಮತ್ತು ಹೆಂಗಸು ಆಕಡೆ ಬಂದರು. ಅವರು ಬೇಡ ದಂಪತಿಗಳು. ಅವರು ರಾಮಾನುಜರ ಬಗ್ಗೆ ವಿಚಾರಿಸಿದರು. “ನಾವು ದಕ್ಷಿಣದ ಕಡೆಗೆ ಹೋಗುತ್ತಿದ್ದೇವೆ. ನೀವು ಕೂಡ ನಮ್ಮ ಜೊತೆಗೆ ಬನ್ನಿ” ಎಂದು ಹೇಳಿದರು.

ಮೂವರೂ ಕಾಡನ್ನು ದಾಟುವ ಹೊತ್ತಿಗೆ ಕತ್ತಲಾಗುತ್ತ ಬಂತು. ಅವರೆಲ್ಲ ಒಂದು ಬಯಲುಪ್ರದೇಶದಲ್ಲಿ ಮಲಗಿದರು. ಮಧ್ಯರಾತ್ರಿಯಲ್ಲಿ ಬೇಡತಿ, ತನಗೆ ಬಾಯಾರಿಕೆ ಎಂದಳು. ಇದನ್ನು ಕೇಳಿಸಿಕೊಂಡ ರಾಮಾನುಜಾಚಾರ್ಯರು, ಆ ನಸುಕಿನಲ್ಲಿಯೇ ಎದ್ದು ನೀರನ್ನು ಹುಡುಕಿಕೊಂಡು ಹೊರಟರು. ದೂರದಲ್ಲಿ ಕೊಳವೊಂದು ಕಾಣಿಸಿತು. ಅಲ್ಲಿಂದ ನೀರು ತಂದು ಬೇಡತಿಗೆ ನೀಡಿದರು. “ನೀರು ತುಂಬ ರುಚಿಯಾಗಿದೆ, ಇನ್ನಷ್ಟು ಬೇಕು” ಎಂದು ಅವಳು ಹೇಳಿದಳು. ರಾಮಾನುಜರು ಮತ್ತೊಮ್ಮೆ ಆ ಕೊಳದ ಬಳಿ ಓಡಿದರು. ಹಿಂತಿರುಗಿ ಬಂದಾಗ ಬೆಳಕಾಗಿತ್ತು. ಆದರೆ ಆ ಬೇಡದಂಪತಿಗಳು ಅಲ್ಲೆಲ್ಲೂ ಕಾಣಸಿಗಲಿಲ್ಲ. ಹಾಗೆಯೇ ಅವರನ್ನು ಹುಡುಕುತ್ತ ಹೋದರು, ರಾಮಾನುಜರು. ಆದರೆ ಆ ಪ್ರದೇಶ ಅವರಿಗೆ ಬಹಳ ಪರಿಚಿತವಾದಹಾಗೆ ಕಂಡುಬಂತು! ಪರಿಚಿತವಾದ ಗೋಪುರಗಳು, ತೆಂಗಿನ ತೋಟಗಳು, ವನಗಳು ಕಾಣಿಸಿಕೊಂಡವು. ಅದು ಅವರ ಊರಾದ ಕಾಂಚೀಪುರವೇ ಆಗಿತ್ತು! ಒಂದೇ ರಾತ್ರಿಯಲ್ಲಿ ಅಷ್ಟು ದೂರದ ವಿಂಧ್ಯಾರಣ್ಯದಿಂದ ಇಲ್ಲಿಗೆ ಬರಲು ಹೇಗೆ ತಾನೇ ಸಾಧ್ಯ? ದೇವರೇ ತಮ್ಮನ್ನು ಇಲ್ಲಿಗೆ ಕರೆದು ತಂದಿರಬೇಕು ಎಂದು ಅವರಿಗೆ ಅನ್ನಿಸಿತು. ಕೂಡಲೇ ಅವರಿಗೆ ವೇದ್ಯವಾಯಿತು, ಆ ಬೇಡ ದಂಪತಿಗಳು ಬೇರೆ ಯಾರೂ ಅಲ್ಲ, ಸಾಕ್ಷಾತ್ ಲಕ್ಷ್ಮೀನಾರಾಯಣರೇ ಎಂದು. ಅವರನ್ನು ರಾಮಾನುಜರು ಹೀಗೆ ಸ್ತುತಿಸಿದರು: “ಭಗವಾನ್, ಅರ್ಜುನನಿಗೆ ನೀನು ನಿನ್ನ ವಿಶ್ವರೂಪವನ್ನು ತೋರಿದೆ. ಕಿರಾತನಾಗಿ ಬಂದು ನನಗೆ ನಿನ್ನ ನಿಜರೂಪವನ್ನು ತೋರಲಾಗದೆ ಹೋದೆ. ಕಿರಾತನೆಂದೇ ನಂಬಿ, ಸಹಚರನೆಂದೇ ಬಗೆದು ನಾನು ಅವಮರ್ಯಾದೆಯಿಂದ ನಿನ್ನೊಡನೆ ಮಾತನಾಡಿದ್ದರೆ, ಇಬ್ಬರೂ ಜೊತೆಗಾರರಂತೆ ಕುಳಿತಾಗ, ಊಟಮಾಡಿದಾಗ, ಮಲಗಿದಾಗ, ದಾರಿ ನಡೆವಾಗ, ಮಾತನಾಡಿದಾಗ, ಏನಾದರೂ ಅಪಚಾರವಾಗಿದ್ದರೆ, ತಿಳಿಯದೆ ಆದ ಆ ಅಪಚಾರವನ್ನು ಮನ್ನಿಸಯ್ಯಾ, ಅಪ್ರಮೇಯಾ.”

ರಾಮಾನುಜರಿಗೆ ಭಗವಂತನಲ್ಲಿ ಕೃತಜ್ಞತೆ ಉಕ್ಕಿಬಂತು. ಅಂದಿನಿಂದ ಆ ಕೊಳದಲ್ಲಿಯೇ ವರದರಾಜನ ಅಭಿಷೇಕಕ್ಕೆ ನೀರನ್ನು ತೆಗೆದುಕೊಂಡು ಹೋಗುವ ಕೈಂಕರ್ಯವನ್ನು ವಹಿಸಿಕೊಂಡರು. ಇಂದಿಗೂ ಆ ಕೊಳದ ನೀರಿನಿಂದಲೇ ದೇವರ ಅಭ್ಯಂಜನ ಕಾರ್ಯ ನಡೆಯುತ್ತಿದೆ.

ಈ ಕಡೆ ಯಾದವಪ್ರಕಾಶರ ಮತ್ತು ಅವರ ಶಿಷ್ಯರ ಪಯಣ ಮುಂದೆ ಸಾಗಿತ್ತು. ಅವರೆಲ್ಲ ಪ್ರಯಾಗದಲ್ಲಿರುವ ತ್ರಿವೇಣಿ ಸಂಗಮಕ್ಕೆ ಬಂದರು. ಒಂದು ದಿನ ಮುಂಜಾನೆ ಸ್ನಾನ ಮಾಡುವಾಗ ಗೋವಿಂದನ ಕೈಗೆ ಒಂದು ಶಿವಲಿಂಗ ದೊರೆಯಿತು. ಅದನ್ನು ಆತ ಗುರುಗಳಿಗೆ ತೋರಿಸಿದನು. ಅವರು, “ಮಗು, ವಿಶ್ವನಾಥ ನಿನ್ನ ಮೇಲೆ ಅನುಗ್ರಹ ಮಾಡಿದ್ದಾನೆ. ನಿನ್ನ ಮೇಲೆ ಈ ರೀತಿ ಪ್ರಸನ್ನನಾಗಿದ್ದಾನೆ. ನೀನೇ ಪುಣ್ಯಶಾಲಿ” ಎಂದರು. ಅಂದಿನಿಂದ ಗೋವಿಂದನು ಶಿವದೀಕ್ಷಾಪರನಾದ. ಅಲ್ಲಿಯೇ ಶಿವಲಿಂಗವನ್ನು ಪ್ರತಿಷ್ಠಾಪನೆ ಮಾಡಿ ಭಸ್ಮರುದ್ರಾಕ್ಷಧಾರಿಯಾಗಿ ಶಿವಪೂಜಾಪರಾಯಣನಾದ. ಕೆಲವು ದಿನಗಳ ನಂತರ ಕಾಳಹಸ್ತಿಯ ಮಹಾರಾಜನು ತನಗೆ ಮಾರ್ಗದರ್ಶಿಯಾಗಿ ಅಲ್ಲಿಯೇ ಬಂದಿರಬೇಕೆಂದು ಗೋವಿಂದನನ್ನು ಕೇಳಿಕೊಂಡ. ಗೋವಿಂದನು ಅದಕ್ಕೆ ಒಪ್ಪಿ, ಕಾಳಹಸ್ತಿಯಲ್ಲಿ ನೆಲೆಗೊಂಡನು.

ಇತ್ತ ಯಾದವಪ್ರಕಾಶರು ಮತ್ತು ಅವರ ಶಿಷ್ಯರು ಕಾಂಚೀಪುರಕ್ಕೆ ಹಿಂದಿರುಗಿದರು. ರಾಮಾನುಜರು ಅಲ್ಲಿರುವುದನ್ನು ಕಂಡು, ಅವರಿಗೆ ತಮ್ಮ ಸಂಚೇನಾದರೂ ತಿಳಿದುಹೋಯಿತೇ ಎಂದು ಗಾಬರಿಯಾದರು. ಆದರೆ ರಾಮಾನುಜರು, ತಮಗೆ ದಾರಿ ತಪ್ಪಿತೆಂದೂ, ಒಬ್ಬ ಬೇಡದಂಪತಿಗಳು ದಾರಿತೋರಿದರೆಂದೂ ಹೇಳಿದರು. ಇದನ್ನು ಕೇಳಿ ಯಾದವಪ್ರಕಾಶರು ಮತ್ತು ಅವರ ಶಿಷ್ಯರು ನಿಶ್ಚಿಂತರಾದರು. ರಾಮಾನುಜರು ಯಾದವಪ್ರಕಾಶರ ಬಳಿಯಲ್ಲಿಯೇ ತಮ್ಮ ಶಿಷ್ಯವೃತ್ತಿಯನ್ನು ಮುಂದುವರಿಸಿದರು.

ಕಾಂಚೀಪುರದ ರಾಜಕುಮಾರಿಗೆ ಬ್ರಹ್ಮಪಿಶಾಚಿ ಹಿಡಿದಿತ್ತು. ವೈದ್ಯ, ಯಂತ್ರ, ತಂತ್ರ – ಯಾವುದೂ ಪ್ರಯೋಜನಕ್ಕೆ ಬರಲಿಲ್ಲ. ಆಗ ರಾಜನು ಯಾದವಪ್ರಕಾಶರಿಗೆ ಹೇಳಿಕಳುಹಿಸಿದನು. ರಾಜನ ಆಜ್ಞೆಯಾದ್ದರಿಂದ ವಿಧಿಯಿಲ್ಲದೆ ಯಾದವಪ್ರಕಾಶರು ಅವನಲ್ಲಿಗೆ ಹೊರಟರು. ತಮ್ಮ ಮಂತ್ರಶಕ್ತಿಯನ್ನೆಲ್ಲಾ ಪ್ರಯೋಗಿಸಿ ನೋಡಿದರೂ